Spiritual Conscious

ಓಂ

ದುರ್ಗಾ ಸಪ್ತಶತಿ · ದೇವಿ ಸ್ತುತಿ

The Devi Within

DURGA SAPTASHATI · DEVI STUTI · 23 SUTRAS

Yā devī sarvabhūteṣu …
namastasyai namastasyai namastasyai namo namaḥ

Siddha Guru Pushkara Purvajna
Commentary in English, with Guruji's original Kannada notes
Spiritual Conscious · JP Nagar, Bengaluru · spiritualconscious.com

ABOUT THIS BOOK

The Mother in every being

In the fifth chapter of the Durga Saptashati, the gods praise the Mother who lives in every being. Verse after verse names where She is found: as consciousness and intelligence, as sleep and hunger, as memory, peace, kindness, even as confusion. Each verse ends with the same bow: *namastasyai, namastasyai, namastasyai, namo namaḥ*.

Siddha Guru Pushkara Purvajna takes these verses as sutras for sadhana. Each one points to something ordinary, the way you sleep, what you hunger for, what you remember, and shows how the Devi is already present there, and how a seeker can meet Her in it.

Here are all 23 sutras in 22 chapters. Each chapter gives the verse in Kannada script and in transliteration, its meaning, and Guruji's commentary in English, followed by his original notes in Kannada. Guruji's talks on the Devi Stuti are on the Spiritual Conscious YouTube channel, and every chapter is also online at spiritualconscious.com/devi-stuti.

CONTENTS

1 The Veil of Illusion
ವಿಷ್ಣುಮಾಯಾ · Vishnumaya

2 The Light of Consciousness
ಚೇತನಾ · Chetana

3 The Gift of Intelligence
ಬುದ್ಧಿ · Buddhi

4 The Grace of Sleep
ನಿದ್ರಾ · Nidra

5 The Sacred Hunger
ಕ್ಷುಧಾ · Kshudha

6 Meeting the Shadow
ಛಾಯಾ · Chhaya

7 The True Meaning of Power
ಶಕ್ತಿ · Shakti

8 The Seeker's Thirst
ತೃಷ್ಣಾ · Trishna

9 The Strength of Forbearance
ಕ್ಷಾಂತಿ · Kshanti

10 Your Unique Nature
ಜಾತಿ · Jati

11 Modesty as Protection

ಲಜ್ಜಾ · Lajja

12 The Nature of Peace

ಶಾಂತಿ · Shanti

13 Faith Without Fear

ಶ್ರದ್ಧಾ · Shraddha

14 Inner Radiance

ಕಾಂತಿ · Kanti

15 Abundance Consciousness

ಲಕ್ಷ್ಮೀ · Lakshmi

16 Work as Worship

ವೃತ್ತಿ · Vritti

17 The Power of Memory

ಸ್ಮೃತಿ · Smriti

18 The Root of Dharma Is Kindness

ದಯಾ · Daya

19 Contentment and Delight

ತುಷ್ಟಿ · Tushti

20 The Mother

ಮಾತೃ · Matru

21 Living with Uncertainty

ಭ್ರಾಂತಿ · Bhranti

22–23 The Senses and the All-Pervading Consciousness

ಇಂದ್ರಿಯ ಮತ್ತು ಚಿತಿ · Indriya and Chiti

The Veil of Illusion

ವಿಷ್ಣುಮಾಯಾ · Vishnumaya

ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಶಬ್ದಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ

Yā devī sarvabhūteṣu viṣṇumāyeti śabditā
Namastasyai namastasyai namastasyai namo namaḥ

That Devi who in all beings is called Vishnumaya: salutations to Her, salutations to Her, salutations to Her, salutations again and again.

> Watch Guruji's talk on this sutra: youtu.be/atwUBUdgeu8 · all talks: Devi Stuti playlist

It is said that Vishnumaya dwells in every living being. We bow to it, we bow to it, every single time we bow to it.

Vishnumaya is a beautiful word. Maya creates within us a boundary called duality: a bond, a snare, the woven net of illusion.

Wherever the word maya appears, it points to duality. A tension begins about what lies beyond the boundary, and that tension creates the urge to break through it. When we accept these dualities as challenges and press forward with courage, we set out on the journey of evolution.

If there were no challenges, no dualities in your life, how would your life ever evolve?

To evolve, you must wrestle with your dualities, accept challenges boldly, struggle and fight. Only then does growth happen. In our Indian philosophy this power is called Vishnumaya. Maya means delusion, or illusion. If a person is caught in the illusion that the Divine Mother's maya creates, caught in the net of this maya, liberation becomes impossible.

Indian philosophy describes several kinds of maya.

1. Anu Maya: maya at the level of the single individual, the individual flame. Limited dualities, through challenge, create human illusions and feed them. Having fed them, maya makes us struggle, toss and fight, and so it builds a whole world. It also shows the way out of that world. This is Anu Maya.

2. Mahamaya: the maya that brings forth and creates all living beings. It fills creation with differences. Without understanding them, without breaking open their secrets, without knowing them personally, beings are caught in confusion. Unable to understand the Mahamaya that runs this world, humans, animals, insects and everything moving and unmoving are filled with their own dualities and left to struggle. Mahamaya has created for each of them their own problems, their own family, their own rules and boundaries, their own ups and downs.

3. Vishwa Maya: maya at the level of the whole universe. It fills the inert and the conscious, the living and the non-living. Even in what you think of as lifeless there is duality, and that duality too keeps moving forward through its disappointments.

4. Vishnu Maya: Vishnumaya is the secret of the supreme principle. In India it is believed that, through the power of Vishnumaya, a protecting power fills everything and everywhere. Vishnumaya is merged, continuously, into the human being as the supreme principle. This is the meaning of the image of Mahavishnu reclining in splendour on the

ocean of milk. Vishnu holds maya, illusion, duality, challenges and events, merging them all within, and floats, drawing everything along.

First it builds a life, then the process of moving on to further lives, and then life evolves in a natural way. But for some, through an inner conscious impulse, a state arises in which they come out of confusion, delusion and maya.

When such inner promptings happen, we understand the Devi through Vishnumaya and Vishwamaya, and call Her Vishnumaya.

By the grace of that prompting, the power that keeps consciousness, the supreme form, floating on the ocean instead of drowning, is Vishnumaya.

ವಿಷ್ಣುಮಾಯಾ

ಸಕಲ ಜೀವರಾಶಿಗಳಲ್ಲಿ ವಿಷ್ಣುಮಾಯೆ ಇದೆ ಎಂದು ಹೇಳಲಾಗಿದೆ.
ಅದನ್ನು ನಾವು ನಮಿಸುತ್ತೇವೆ ನಮಿಸುತ್ತೇವೆ ಪ್ರತಿಬಾರಿಯೂ ನಮಿಸುತ್ತೇವೆ.

ಇದು ಒಂದು ಸುಂದರವಾದ ಶಬ್ದ ವಿಷ್ಣುಮಾಯೆ: ಮಾಯಾ ಎಂಬ ಅರ್ಥ ನಮ್ಮಲ್ಲಿ ದ್ವೈತ ವೆಂಬ ಎಲ್ಲೆಯನ್ನು ರಚಿಸುತ್ತದೆ (boundary) / ಬಂಧನ / ಬಲೆ / ಮಾಯಾ ಬಲೆಯ ಜಾಲ.
ಎಲ್ಲಿ ಒಂದು ರೀತಿಯ ಮಾಯೆ ಎಂಬ ಶಬ್ದ ಬರುತ್ತದೋ, ಅಲ್ಲಿ ದ್ವೈತ ವೆಂಬ ಅರ್ಥವಾಗುತ್ತದೆ.
ಆಗ ಇದರ ಆಚೆ ಏನಿದೆ ಎಂದು ದ್ವಂದ್ವತೆ ಶುರುವಾಗಿ ಅದನ್ನು ಭೇದಿಸುವ ಸ್ಥಿತಿಯನ್ನು ಉಂಟುಮಾಡುತ್ತದೆ. ಆಗ ಇಂತಹ ದ್ವಂದ್ವಗಳನ್ನು ಸವಾಲಾಗಿ ಸ್ವೀಕರಿಸಿ, ಧೈರ್ಯದಿಂದ ಮುನ್ನುಗ್ಗಿ, ವಿಕಾಸದ ಯಾತ್ರೆಗೆ ಪ್ರಯಾಣಿಸುತ್ತದೆ.
ಹೀಗೆ ಸವಾಲುಗಳು (challenge) ಇಲ್ಲದಿದ್ದರೆ ನಿಮ್ಮ ಜೀವನದಲ್ಲಿ ದ್ವಂದ್ವತೆ ಗಳಿಲ್ಲದಿದ್ದರೆ ನಿಮ್ಮ ಜೀವನ ವಿಕಾಸ ಹೇಗೆ ಆಗುತ್ತದೆ?.
ಹೀಗೆ ವಿಕಾಸವಾಗಬೇಕಾದರೆ, ದ್ವಂದ್ವತೆ ಗಳಿಂದ ಹೋರಾಡಿ ಧೈರ್ಯವಾಗಿ ಸವಾಲುಗಳನ್ನು ಸ್ವೀಕರಿಸಿ, ಬಡಿದಾಡಿ, ಹೋರಾಡಿದರೆ ಮಾತ್ರ ನಿಮ್ಮ ವಿಕಾಸವಾಗುವುದು.
ಇಲ್ಲಿ ನಮ್ಮ ಭಾರತೀಯ ದರ್ಶನದಲ್ಲಿ ವಿಷ್ಣುಮಾಯೆ ಎಂದು ಉಲ್ಲೇಖಿಸಲಾಗಿದೆ.
ಮಾಯೆ ಎಂದರೆ ಭ್ರಮೆ ಅಥವಾ illusion
ಈಶ್ವರಿ ಮಾಯೆಯ ರಚನೆಯ ಭ್ರಮೆಯಲ್ಲಿ ಸಿಕ್ಕಿಬಿದ್ದರೆ ಹಾಗೂ ಈ ಮಾಯೆಯ ಬಲೆಯಲ್ಲಿ ಸಿಕ್ಕಿಬಿದ್ದರೆ, ಮನುಷ್ಯನ ಬಿಡುಗಡೆ ಅಸಾಧ್ಯ.
ಇಂತಹ ಮಾಯೆಗಳು ನಮ್ಮ ಭಾರತ ದರ್ಶನದಲ್ಲಿ ಹಲವಾರು ರೀತಿಯ ಮಾಯೆ ಇದೆ.

1: ಅಣು ಮಾಯಾ: ಒಂದು ಏಕಾಂಗಿಯಾದ ಸ್ತರದಿಂದ / ಕಿಡಿ (individual Flame)
ಸೀಮಿತವಾದ ದ್ವಂದ್ವಗಳು (ದ್ವೈತ) ಸವಾಲಿನಿಂದ ಮನುಷ್ಯನ ಭ್ರಮೆಗಳನ್ನು ಉಂಟು ಮಾಡಿ ಪುಷ್ಟಿ ಕೊಡುತ್ತದೆ. ಹಾಗೆ ಪುಷ್ಟಿಯನ್ನು ಕೊಟ್ಟು ಅದನ್ನು ಬಡಿದಾಡಿಸಿ, ಹೊರಳಾಡಿಸಿ, ಹೊಡೆದಾಡಿಸಿ ಒಂದು ಜಗತ್ತನ್ನು ನಿರ್ಮಾಣ ಮಾಡುತ್ತದೆ. ಹಾಗೂ ಆ ಜಗತ್ತಿನಿಂದ ಹೊರಗೆ ಬರುವ ಮಾರ್ಗವನ್ನು ಸಹ ತೋರಿಸುತ್ತದೆ. - ಇದು ಅಣು ಮಾಯಾ

2: ಮಹಾಮಾಯಾ: ಸಕಲ ಪ್ರಾಣಿಗಳನ್ನು ಉತ್ಪನ್ನ ಮಾಡಿ ಸೃಷ್ಟಿಸುತ್ತದೆ. (create)
ಹಾಗೆ ಅದರಲ್ಲಿ ವಿಭೇದಗಳನ್ನು (differientiate) ತುಂಬಿಸಿ ಅದನ್ನು ಅರ್ಥಮಾಡಿಕೊಳ್ಳದೆ, ಅದರ

ರಹಸ್ಯಗಳನ್ನು ಭೇಧಿಸದೇ, ಅದರ ರಹಸ್ಯಗಳನ್ನು ಅರಿಯದೆ, ವ್ಯಕ್ತಿಗತವಾಗಿ ಅರ್ಥಮಾಡಿಕೊಳ್ಳದೆ, ಗೊಂದಲಗಳಲ್ಲಿ ಸಿಕ್ಕಿಸಿ, ಹಾಗೂ ಈ ಪ್ರಪಂಚದಲ್ಲಿರುವ ಮಹಾಮಾಯೆಯನ್ನು ಅರ್ಥಮಾಡಿಕೊಳ್ಳಲಾಗದೆ, ಮನುಷ್ಯನ ದ್ವಂದ್ವತೆಗಳು, ಪ್ರಾಣಿಗಳ ದ್ವಂದ್ವತೆಗಳು, ಕ್ರಿಮಿಕೀಟಗಳ ದ್ವಂದ್ವತೆಗಳು, ಹಾಗೂ ಸಕಲ ಚರಾಚರದ ದ್ವಂದ್ವತೆಗಳನ್ನು ತುಂಬಿಸಿ, ಹೋರಾಡಲು ಬಿಟ್ಟು, ಅವರದೇ ಆದ ಸಮಸ್ಯೆಗಳು, ಅವರದೇ ಆದ ಒಂದು ಪರಿವಾರ, ಅವರದೇ ಆದ ಒಂದು ನಿಯಮ (rule / boundary), ಅವರದೇ ಆದ ಏರಿಳಿತಗಳನ್ನು ಸೃಷ್ಟಿಸಿದೆ ಈ ಮಹಾಮಾಯಾ.

3: ವಿಶ್ವ ಮಾಯಾ: ಅಂದರೆ ವಿಶ್ವದ ಬ್ರಹ್ಮಾಂಡದ ಸ್ತರದಲ್ಲಿ ಜಡ,
ಚೇತನದಲ್ಲಿ / ಜೀವ, ನಿರ್ಜೀವಗಳಲ್ಲಿ ತುಂಬಿ ಹೋಗಿದೆ (ತುಂಬಿಕೊಂಡಿದೆ),
ಯಾರು ಇದನ್ನು ನಿರ್ಜೀವವೆಂದು ತಿಳಿದಿರುವಿರೋ, ಅದರಲ್ಲೂ ಸಹ ದ್ವೈತವಿದೆ. ಅಂತಹ ದ್ವೈತವು ಸಹ ನಿರಾಶೆಗಳಿಂದ ಮುಂದೆ ಮುಂದೆ ಸಾಗುತ್ತಲೇ ಇರುತ್ತದೆ.

4: ವಿಷ್ಣು ಮಾಯಾ: ವಿಷ್ಣುಮಾಯೆ ಎಂಬುದು ಒಂದು ಪರಮ ತತ್ವದ ರಹಸ್ಯವು.
ಹಾಗೂ ವಿಷ್ಣು ಮಾಯೆಯ ಶಕ್ತಿಯಿಂದಲೇ ಎಲ್ಲೂ ತುಂಬಿಕೊಂಡಿದೆ ತುಂಬಿ ಹೋಗಿದೆ ನಮ್ಮನ್ನು ಕಾಪಾಡುವ ಒಂದು ಶಕ್ತಿ ಇದೆ ಎಂದು ನಮ್ಮ ಭಾರತದಲ್ಲಿ ನಂಬಲಾಗಿದೆ.
ವಿಷ್ಣುಮಾಯೆ ಎಂಬುದು ಮನುಷ್ಯನ ಒಳಗೆ ಪರಮ ತತ್ವವಾಗಿ ನಿರಂತರವಾಗಿ ಬೆರೆತುಹೋಗಿದೆ (merge) ಇದರ ಅರ್ಥ ಮಹಾವಿಷ್ಣುವಿನ ರೂಪದ ಕ್ಷೀರಸಾಗರದಲ್ಲಿ ವಿರಾಜಮಾನವಾಗಿ ಮಲಗಿದ್ದಾನೆ ಎಂಬುವ ಅರ್ಥ.

ವಿಷ್ಣು ಎಂದರೆ ಮಾಯಾ, ಭ್ರಮೆ (illusion), ದ್ವಂದ್ವತೆ, ಸವಾಲುಗಳು, ಘಟನೆಗಳು ಎಲ್ಲವೂ ವಿಲೀನಗೊಲಿಸಿ (merge) ತುಂಬಿಕೊಂಡು ತೇಲಾಡ್ತಾ ಎಳೆಯುತ್ತಿರುತ್ತದೆ.

ಮೊದಲು ಜೀವನ ನಿರ್ಮಾಣ ಮಾಡುತ್ತದೆ, ನಂತರ ಮುಂದೆ ಮುಂದಿನ ಜೀವನ ಪಡೆಯುವ ಕ್ರಮ, ನಂತರ ಜೀವನ ಒಂದು ರೀತಿಯ ಸಹಜ ರೀತಿಯಲ್ಲಿ ವಿಕಸಿತ ವಾಗುತ್ತದೆ. ಆದರೆ ಕೆಲವರಿಗೆ ಅಂತರ್ ಪ್ರೇರಣೆಯಿಂದ (inner conscious), ಗೊಂದಲಗಳಿಂದ, ಭ್ರಮೆಯಿಂದ, ಮಾಯೆಯಿಂದ, ಹೊರಗೆ ಬರುವ ಸ್ಥಿತಿಯು ಘಟಿಸುತ್ತದೆ.

ಅಂತರ್ ಪ್ರೇರಣೆಗಳು ಯಾವಾಗ ಘಟಿಸುವುದೋ, ಆಗ ವಿಷ್ಣು ಮಾಯೆಯಿಂದ, ವಿಶ್ವ ಮಾಯೆಯಿಂದ, ಆ ದೇವಿಯನ್ನು ವಿಷ್ಣುಮಾಯೆ ಎಂದು ಅರ್ಥೈಸಿ ಕರೆಯುತ್ತೇವೆ.

ಅಂತಹ ಪ್ರೇರಣೆಯ ಕೃಪೆಯಿಂದ ಚೈತನ್ಯವನ್ನು, ಪರಮ ರೂಪವನ್ನು, ಸಾಗರದಲ್ಲಿ ಮುಳುಗಿಸದೆ, ತೇಲಿಸುವ ಶಕ್ತಿಯೇ ವಿಷ್ಣು ಮಾಯೆ.

ಓಂ ನಮಃ ಚಂಡಿಕಾಯೈ · ಓಂ ದುರ್ಗಾರ್ಪಣಮಸ್ತು

The Light of Consciousness

ಚೇತನಾ · Chetana

ಯಾ ದೇವೀ ಸರ್ವಭೂತೇಷು ಚೇತನೇತ್ಯಭಿಧೀಯತೇ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ

Yā devī sarvabhūteṣu cetanetyabhidhīyate
Namastasyai namastasyai namastasyai namo namaḥ

That Devi who is reflected in all beings as consciousness: salutations to Her, again and again.

> Guruji's Devi Stuti talks, in Kannada: the YouTube playlist

This power of the Devi is reflected in every living creature in the form of consciousness. I bow, I bow, I bow, every time I bow.

The life force of every being is this Devi Shakti.

This living consciousness that expresses itself is the work of a great power inside us. Yet to see the Devi who is this power of consciousness, we travel far: to hilltops, caves, temples and idols, searching everywhere.

But the meaning of this sutra is that the divinity of that power is the one inside you.

When we notice this consciousness and join with it, when we connect with it mentally, beyond emotion and physically, at that very moment we

receive the experience of the Devi, Her vision and Her grace.

Instead we only imagine some form of Her. The Durga Saptashati does describe the Devi's forms, but the sutra says the Devi appears as an experience of the power of consciousness. Within us, the light of the Devi's awareness, the power of Her flame, may at first be dim, then a little brighter, then intense, and finally perfectly radiant and crystal clear.

Our journey, though, must remain one journey. Then the work of the power of consciousness keeps expressing itself:

- from slow to moderate,
- from moderate to intense,
- from intense to the radiant experience of crystal clarity.

This experience is the power of Ma Durga.

No one can stop it; it is not possible for anyone to stop it. This is the power of maya. How could any illusion, any condition, any assumption, any belief, any sectarian conviction hold this power back? No one can restrain it.

What matters is only the path we walk. We must walk toward that power, and on the way there will be stones, thorns and dust. We must move them aside. Then comes the realisation of the Devi's power.

Realisation of the Devi is in everyone, because what is inside us is that very Devi consciousness. But to see Her fully, we must first be subtle and in the present (pleasant and present).

The Devi is already hidden inside us, subtly, in the present moment. When we too, subtly and in the present, join with Her power, we receive Her complete vision.

Do not dismiss this as illusion or maya, or picture it through other imaginings. Those are just fancies of the mind.

The Durga Saptashati shows us many right paths of practice, and we have the chance to realise the Devi. But practice becomes real only when we connect with the state of that power. Otherwise there is no realisation and the practice is wasted. That is why the guidance and grace of a Guru are so important for experiencing the Devi.

Many people have a habit of fasting. The real meaning of upavasa is to stay close to that power and close to our own presence.

But when fasting means skipping food, our attention turns more toward the body. What we need is to centre our concentration on the power of consciousness. Eating is not about stuffing the stomach, then sleeping, dozing and growing heavy. A small, balanced amount of food is best.

Otherwise your vitality drops and the radiance of your body fades. So stay alert, stay lively and increase your vitality.

Some people, while keeping a vow, prepare tasty dishes and eat a little of everything; be relaxed, lively and joyful. But after the fast ends, eating everything in sight ruins your health, so be moderate.

True fasting is living in the presence of the divine power within you: staying close to the consciousness inside you and abiding in its radiant power. That is upavasa.

ಚೇತನಾ

ಈ ದೇವಿ ಶಕ್ತಿಯು ಸರ್ವ ಜೀವರಾಶಿಯ ಪ್ರಾಣಿಗಳಲ್ಲಿ ಚೇತನ ಸ್ವರೂಪದಲ್ಲಿ ಪ್ರತಿಬಿಂಬಿತವಾಗಿದೆ
ನಾನು ನಮಿಸುತ್ತೇನೆ ನಮಿಸುತ್ತೇನೆ ನಮಿಸುತ್ತೇನೆ ಪ್ರತಿ ಬಾರಿ ಬಾರಿಯೂ ನಮಿಸುತ್ತೇನೆ.

ಪ್ರತಿ ಜೀವಿಯ ಚೈತನ್ಯ ಶಕ್ತಿಯೇ ಈ ದೇವಿ ಶಕ್ತಿಯು.
ಈ ಅಭಿವ್ಯಕ್ತಿಯ ಚೈತನ್ಯ ಸ್ವರೂಪವೇ ನಮ್ಮೊಳಗಿರುವ ಒಂದು ಮಹಾಶಕ್ತಿಯ ರಚನೆ. ಇಂತಹ ಚೇತನ ಶಕ್ತಿಯಾದ ದೇವಿಯನ್ನು ನೋಡಲು ದೂರ ದೂರ ಹೋಗುತ್ತೇವೆ. ಬೆಟ್ಟಗಳ ಮೇಲೆ, ಗುಹೆಗಳಲ್ಲಿ, ಮಂದಿರಗಳಲ್ಲಿ, ಮೂರ್ತಿಗಳಲ್ಲಿ ಇನ್ನು ಎಲ್ಲೆಲ್ಲೋ ಹುಡುಕುತ್ತೀರಿ.

ಆದರೆ ಈ ಸೂತ್ರದ ಅರ್ಥ: ನಿಮ್ಮೊಳಗಿರುವ ಆ ಶಕ್ತಿಯ ದೈವವೇ ಅದಾಗಿದೆ.
- ಯಾ ದೇವಿ ಸರ್ವ-ಭೂತೇಷ್ಸು ಚೇತನೇತಿ-ಅಭಿಧೀಯತೇ ||

ಯಾವಾಗ ನಾವು ಈ ಚೈತನ್ಯವನ್ನು ಗಮನಿಸಿ ಅದರ ಜೊತೆಗೆ ಸೇರಿಕೊಳ್ಳುವಿರೋ, ಮಾನಸಿಕವಾಗಿ, ಭಾವಾತೀತವಾಗಿ, ಶಾರೀರಿಕವಾಗಿ, ಆವಿರ್ಭವಿಸಿ ಕೊಳ್ಳುವಿರೋ (connect ಆಗುತ್ತಿರೋ), ತಕ್ಷಣ ದೇವಿಯ ಅನುಭವ ಅಥವಾ ದೇವಿಯ ದರ್ಶನ, ದೇವಿಯ ಕೃಪೆ ಸಿಗುತ್ತದೆ.

ಆದರೆ ನಾವು ಒಂದು ಕಲ್ಪನೆಯ ರೂಪವನ್ನು ಮಾತ್ರ ಊಹಿಸಿ ಕೊಳ್ಳುತ್ತೇವೆ ಅಥವಾ ಕಲ್ಪಿಸುತ್ತೇವೆ. ಆದರೆ ಸೂತ್ರ ಹೇಳುತ್ತದೆ ದುರ್ಗಾ ಸಪ್ತಶತಿ ಯಲ್ಲಿ ದೇವಿಯ ರೂಪದ ವರ್ಣನೆಯನ್ನು ಹೇಳಲಾಗಿದೆ.

ದೇವಿ ಪ್ರಕಟವಾಗುವುದು ಚೇತನ ಶಕ್ತಿಯ ರೂಪದ ಅನುಭವವಾಗಿ, ನಮ್ಮೊಳಗೆ ದೇವಿ ಪ್ರಜ್ಞೆಯ ಪ್ರಕಾಶದ ಬೆಳಕು ಅಥವಾ ಜ್ವಾಲೆಯ ಶಕ್ತಿ ಮಂದವಾಗಿ (dim),
ಸ್ವಲ್ಪ ಪ್ರಕಾಶವಾಗಿ ನಂತರ ತೀವ್ರ ಗತಿಯು ಆಗಬಹುದು.
ಅಥವಾ ಪರಿಪೂರ್ಣವಾದ ಪ್ರಕಾಶಮಾನವಾದ ಸ್ಪಷ್ಟವೂ ಆಗಬಹುದು. (crystal clear)
ಆದರೆ ನಮ್ಮ ಪ್ರಯಾಣದ ಯಾತ್ರೆ (journey) ಒಂದೇ ಆಗಿರಬೇಕು. ಆಗ ಚೇತನ ಶಕ್ತಿಯ ರಚನೆ ಅಭಿವ್ಯಕ್ತ ವಾಗಿರುತ್ತದೆ.
ಮಂದಗತಿಯಿಂದ - ಮಧ್ಯಮಗತಿಯಿಂದ
ಮಧ್ಯಮಗತಿಯಿಂದ - ತೀವ್ರಗತಿ
ತೀವ್ರಗತಿಯಿಂದ - ಪ್ರಕಾಶಮಾನವಾದ ಸ್ಪಷ್ಟತೆಯ ಅನುಭವ (crystal clear)

ಈ ಅನುಭವವೇ ಮಾ ದುರ್ಗಾಮಾತೆಯ ಶಕ್ತಿ.
ಇದನ್ನು ಯಾರು ನಿಲ್ಲಿಸಲು ಅಸಾಧ್ಯ, ನಿಲ್ಲಿಸಲು ಯಾರಿಂದಲೂ ಸಾಧ್ಯವೂ ಆಗದು.
ಇದೆ ಮಾಯಾಶಕ್ತಿ. ಇದನ್ನು ಭ್ರಮೆಯಿಂದ (illusion), ಯಾವ ಷರತ್ತುಗಳಿಂದ (condtion), ಯಾವ ರೀತಿಯ ಧಾರಣೆಗಳಿಂದ, ಯಾವ ಮಾನ್ಯತೆಗಳಿಂದ, ಮತ ಭೇದಗಳ ವಿಶ್ವಾಸಗಳಿಂದ, ಈ ಶಕ್ತಿಯನ್ನು ತಡೆಯಲು ಹೇಗೆ ಸಾಧ್ಯ?
ಯಾರಿಂದಲೂ ತಡೆಗಟ್ಟಲು ಅಸಾಧ್ಯ.

ಆದರೆ ನಾವು ನಡೆಯುವ ಮಾರ್ಗ ಮಾತ್ರ ಮುಖ್ಯ. ಆ ಶಕ್ತಿಯ ಮಾರ್ಗದ ಕಡೆ ನಡೆಯಬೇಕು, ಹಾಗೆ ನಾವು ನಡೆಯುವ ಮಾರ್ಗದಲ್ಲಿ ಕಲ್ಲು ಮುಳ್ಳು ಧೂಳು ತುಂಬಿಕೊಂಡಿರುತ್ತದೆ ಅದನ್ನು ನಾವು ಪಕ್ಕಕ್ಕೆ ಸರಿಸಬೇಕು ಆಗಲೇ ದೇವಿ ಶಕ್ತಿಯ ಸಾಕ್ಷಾತ್ಕಾರ.

ದೇವಿಯ ಸಾಕ್ಷಾತ್ಕಾರ ಪ್ರತಿಯೊಬ್ಬರಲ್ಲೂ ಇದೆ, ಏಕೆಂದರೆ ನಮ್ಮೊಳಗಿರುವುದೇ
ಆ ದೇವಿ ಚೈತನ್ಯವು. ಆದರೆ ಆಕೆಯನ್ನು ಪರಿಪೂರ್ಣವಾಗಿ ನೋಡುವುದಾದರೆ, ಮೊದಲು ನಾವು ಸೂಕ್ಷ್ಮ ಗತಿಯಿಂದ ಮತ್ತು ವರ್ತಮಾನದಲ್ಲಿ ಇರಬೇಕು.
(Pleasant & present)

ಆ ದೇವಿಯು ನಮ್ಮೊಳಗೆ ಮೊದಲೇ ಸೂಕ್ಷ್ಮವಾಗಿ ವರ್ತಮಾನದಲ್ಲಿ ಅಡಗಿದೆ.
ಆದರೆ ನಾವು ಸಹ ಸೂಕ್ಷ್ಮದಿಂದ ವರ್ತಮಾನದಲ್ಲಿ ಈ ದೇವಿಯ ಶಕ್ತಿಯ ಜೊತೆ ಸೇರಿಕೊಂಡಾಗ ಆ ದೇವಿಯ ಪರಿಪೂರ್ಣ ದರ್ಶನ ಸಿಗುತ್ತದೆ.
ಇದನ್ನು ಭ್ರಮೆಯೆಂದು, ಮಾಯೆಯೆಂದು, ಇನ್ನು ಹಲವಾರು ರೀತಿಯ ಕಲ್ಪನೆಯಿಂದ ಊಹಿಸಬೇಡಿ ಇದೆಲ್ಲ ನಮ್ಮ ಮನಸ್ಸಿನ ಕಲ್ಪನೆಗಳು.

ದುರ್ಗಾ ಸಪ್ತಶತಿ ಯಲ್ಲಿ ನಮಗೆ ಹಲವಾರು ಸರಿಯಾದ ಸಾಧನೆ ಮಾರ್ಗವನ್ನು ತೋರಿಸುತ್ತದೆ, ಆ ದೇವಿಯನ್ನು ಸಾಕ್ಷಾತ್ಕರಿಸಲು ನಮಗೆ ಅವಕಾಶವಿದೆ, ಆದರೆ ನಾವು ಆ ಶಕ್ತಿಯ ಸ್ಥಿತಿಗೆ ಸಂಪರ್ಕಿಸಿದಾಗ ಮಾತ್ರ ನಿಜವಾದ ಸಾಧನೆ. ಇಲ್ಲದಿದ್ದರೆ ಆ ದೇವಿಯ ಸಾಕ್ಷಾತ್ಕಾರ ಆಗದು, ಸಾಧನೆ ವ್ಯರ್ಥವಾಗುತ್ತದೆ.
ಆದ್ದರಿಂದ ದೇವಿಯ ಸಾಕ್ಷಾತ್ಕಾರ ಅನುಭವಿಸಲು ಗುರುವಿನ ಮಾರ್ಗ ದರ್ಶನ, ಕೃಪೆ ಬಹಳ ಮುಖ್ಯ.

ಹಲವರಿಗೆ ಉಪವಾಸದ ವಾಡಿಕೆ: ಉಪವಾಸದ ಅರ್ಥವೇ ಶಕ್ತಿಯ ಜೊತೆ ನಿಕಟವಾಗಿರುವುದು ಮತ್ತು ನಮ್ಮ ಉಪಸ್ಥಿತಿಯ ನಿಕಟವಾಗಿರುವುದು.

ಆದರೆ ಉಪವಾಸ ವೆಂದು ಊಟ ಬಿಡುವುದು, ಊಟ ಬಿಡುವುದರಿಂದ ನಮ್ಮ ಗಮನ (concentration / ಏಕಾಗ್ರತೆ) ನಮ್ಮ ಶರೀರದ ಕಡೆಗೆ ಹೆಚ್ಚು ಗಮನಿಸುತ್ತೇವೆ.

ಆದರೆ ನಮಗೆ ಬೇಕಾಗಿರುವುದು ಚೇತನ ಶಕ್ತಿಯ ಮೇಲೆ ಏಕಾಗ್ರತೆಯನ್ನು ಹೊಂದುವುದೇ ಮುಖ್ಯವಾಗಿರಬೇಕು. (center of concentation) ಊಟದ ಅರ್ಥ ಹೊಟ್ಟೆ ತುಂಬಿಸುವುದು ಅಲ್ಲ, ಹೊಟ್ಟೆ ತುಂಬಿದ ಮೇಲೆ ನಿದ್ರೆ ಮಾಡುವುದಲ್ಲ, ತೂಕಡಿಸುವುದು ಅಲ್ಲ, ಜಡತ್ವವನ್ನು ಹೊಂದುವುದಲ್ಲ, ಸಮಾನಾಂತರದಿಂದ ಅಲ್ಪಸ್ವಲ್ಪ ಆಹಾರ ಉತ್ತಮ.

ಇಲ್ಲದಿದ್ದರೆ ನಿಮ್ಮ ಶಕ್ತಿಯ ಚೈತನ್ಯವು ಕಡಿಮೆಯಾಗಿ, ನಿಮ್ಮ ಶರೀರದಲ್ಲಿನ ತೇಜಸ್ಸು ಕುಂಠಿತವಾಗುವುದು, ಆದ್ದರಿಂದ ಜಾಗರೂಕರಾಗಿ ಗಮನಿಸಿ, ಚೈತನ್ಯಮಯವಾಗಿರಿ, ನಿಮ್ಮ ಶಕ್ತಿಯ ಚೈತನ್ಯವನ್ನು ಹೆಚ್ಚಿಸಿಕೊಳ್ಳಿ.

ಕೆಲವರು ವ್ರತಗಳನ್ನು ಮಾಡುವಾಗ ರುಚಿಕರವಾದ ಆಹಾರ ಪದಾರ್ಥಗಳನ್ನು ತಯಾರಿಸಿ ಎಲ್ಲವನ್ನು ಸ್ವಲ್ಪ ಸ್ವಲ್ಪ ತಿಂದು ಆರಾಮವಾಗಿ, ಚೈತನ್ಯಮಯವಾಗಿ, ಆನಂದವಾಗಿರಿ. ಉಪವಾಸವನ್ನು ನಿಲ್ಲಿಸಿದ ಮೇಲೆ ಸಿಕ್ಕಿದ್ದನ್ನೆಲ್ಲ ತಿಂದು ಆರೋಗ್ಯವನ್ನು ಹಾಳು ಮಾಡಿಕೊಳ್ಳುವಿರಿ, ಆದ್ದರಿಂದ ನಿಯಮಿತವಾಗಿರಿ.

ನಿಜವಾದ ಉಪವಾಸವೆಂದರೆ ನಿಮ್ಮೊಳಗಿನ ದೈವೀ ಶಕ್ತಿಯ ಸಾನಿಧ್ಯದಲ್ಲಿ ಇರುವುದು. ಅರ್ಥಾತ್ ನಿಮ್ಮೊಳಗಿನ ಚೈತನ್ಯದಲ್ಲಿ ನಿಕಟವಾಗಿದ್ದು ನಿಮ್ಮೊಳಗಿನ ಪ್ರಕಾಶಮಾನವಾದ ಶಕ್ತಿಯಲ್ಲಿ ಉಪಸ್ಥಿತ ವಾಗಿರುವುದೇ ಉಪವಾಸ.

ಓಂ ನಮಃ ಚಂಡಿಕಾಯೈ · ಓಂ ದುರ್ಗಾರ್ಪಣಮಸ್ತು

DEVI STUTI · SUTRA 3 OF 23

The Gift of Intelligence

ಬುದ್ಧಿ · Buddhi

ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ

Yā devī sarvabhūteṣu buddhirūpeṇa saṃsthitā
Namastasyai namastasyai namastasyai namo namaḥ

> Guruji's Devi Stuti talks, in Kannada: the YouTube playlist

That Devi who abides in all beings, for a lifetime, in every form of intelligence: salutations to Her, again and again.

That Devi is bound into every creature in the form of intelligence. To that power, in which intelligence shines eternally, salutations, salutations, salutations, salutations always.

Buddhi means intelligence. Buddhi, good intelligence, lack of intelligence, twisted intelligence and wicked intelligence: in all of these we see the Devi's power expressing itself, and we call it Adi Shakti, the primal power. Intelligence is the original instrument and means that creation has been given for living. The moment we join with our intelligence, we have joined with the Devi too, because in the form of intelligence that power shines in everything.

How does intelligence reveal itself? Through right knowledge and vision, it reveals itself in all four directions around us. It shows every path a definite course, brings everything together, protects and endures, and as our duty it gives our work its growth. Watching and noticing how that same power works through all these processes: that is intelligence and its influence. Every animal, bird and insect shows its own kind of intelligence. No class of creature is deprived of it.

Whether it is a butterfly or a bird, every living being has an intelligence of its own. By it, the creature lives, runs, flies, floats and swims. Looking at the rays of the sun, it knows how to rise, how to rest and how to work.

In human beings, though, the Devi's power of consciousness is boundless (it can evolve) and undetermined.

In animals and birds the power of consciousness takes a fixed form, while the human being lives in an open, undetermined intelligence. So you can do anything: do what you wish, do nothing at all, or simply stay still. We all keep watching the growth of human intelligence: knowledge, science, wisdom, great knowledge, divine knowledge. Through so many kinds of intelligence a person evolves, in ways it is impossible to predict or imagine.

The Devi's power reveals its vast consciousness fully within the human being. Then intelligence appears and begins to be active.

According to this sutra, how should we practise toward the Devi? By stopping dullness, inertia and twisted thinking, and by coming out of blind beliefs and sectarian convictions.

Only when I understand and know that being with the Devi's power means being joined with intelligence does it mean that the Devi shines within us in the form of intelligence.

Looking at some organised religions is frightening. There the talk is loud and forceful. Gatherings (satsangs) are arranged to give knowledge.

But look closely and you find a narrow mind: their own cult, their own worship, their own system.

These stunt our onward journey, the spiritual journey. They say: stop the growth of your intelligence, end it, leave your mind outside and then come in.

They say that when your intelligence ends, your spiritual journey begins.

But the moment your intelligence ends, the Devi's power ends too, because that great conscious power has revealed herself as intelligence.

Traditions, exploitation and organisations are all attempts to shrink human intelligence.

So intelligence must not be destroyed; it must be developed. Intelligence is a very beautiful thing.

A seeker's intelligence must be very alert. If we are not alert, we too stay asleep, like the plants, trees, animals, cattle and many wild creatures that live in a state of sleep.

So be alert, be awake. Arise, walk the spiritual path, reach your spiritual goal, keep moving forward and be victorious.

This is the sutra:

ಬುದ್ಧಿ

ಆ ದೇವಿಯು ಸರ್ವ ಪ್ರಾಣಿಗಳಲ್ಲಿ ಬುದ್ಧಿಯ ರೂಪದಲ್ಲಿ ಬದ್ಧವಾಗಿದೆ, ಹಾಗೂ ಬುದ್ಧಿಶಕ್ತಿಯು ವಿರಾಜಮಾನವಾಗಿ ಶಾಶ್ವತವಾಗಿರುವ ಅಂತಹ ಶಕ್ತಿಗೆ ನಮಸ್ಕಾರ ನಮಸ್ಕಾರ ನಮಸ್ಕಾರ ಸರ್ವದಾ ನಮಸ್ಕಾರ.

ಬುದ್ಧಿ intelligence: ಬುದ್ಧಿ, ಸುಬುದ್ಧಿ, ನಿರ್ಬುದ್ಧಿ, ಕುಬುದ್ಧಿ, ದುರ್ಬುದ್ಧಿ, ಇದೆಲ್ಲವೂ ದೇವಿಯ ಅಭಿವ್ಯಕ್ತವಾಗಿರುವ ದೇವಿಶಕ್ತಿಯನ್ನು ಆದಿಶಕ್ತಿಯೆಂದು ನೋಡುತ್ತೇವೆ. ಸೃಷ್ಟಿಯ ಜೀವನದ ಸರ್ವಾದಿ ಕರಣ ಉಪಾಯವು ಸಿಕ್ಕಿರುವುದೇ ಬುದ್ಧಿ. ಯಾವಾಗ ನಾವು ನಮ್ಮ ಬುದ್ಧಿಯ ಜೊತೆ ಸೇರಿಕೊಳ್ಳುತ್ತೇವೆ ಆ ಕ್ಷಣ ನಾವು ಆ ದೇವಿಯ ಜೊತೆಗೂ ಸೇರಿಕೊಂಡಿರುತ್ತೇವೆ. ಅಲ್ಲಿ ಬುದ್ಧಿಯ ರೂಪದಲ್ಲಿ ಸಹ ಶಕ್ತಿ ಎಲ್ಲದರಲ್ಲಿಯೂ ವಿರಾಜಮಾನವಾಗಿರುವಳು. ಆದರೆ ಬುದ್ಧಿಯು ಪ್ರಕಟ ಗೊಳಿಸುವುದು ಹೇಗೆಂದರೆ, ಒಳ್ಳೆಯ ಜ್ಞಾನ ದರ್ಶನದಿಂದ ನಮ್ಮ ಸುತ್ತಲೂ ತುಂಬಿರುವ ನಾಲ್ಕು ದಿಕ್ಕುಗಳಲ್ಲಿ ಪ್ರಕಟಗೊಳಿಸಿ, ಎಲ್ಲಾ ಮಾರ್ಗವನ್ನು ಒಂದು ನಿರ್ದಿಷ್ಟ ವಾದ ಗತಿಯನ್ನು ತೋರಿಸುವ, ಎಲ್ಲವನ್ನು ಸೇರಿಸುವ, ಕಾಪಾಡುವ, ಸಹಿಸುವ ಕರ್ತವ್ಯವಾಗಿ ಕಾರ್ಯದ ವಿಕಾಸವನ್ನು ಕೊಡುವವ ನಾಗಿ ಅದೇ ಶಕ್ತಿಯು ಪ್ರಕ್ರಿಯೆಗಳನ್ನು ನೋಡಿ ಗಮನಿಸ ಬೇಕಾಗಿರುವುದೇ ಬುದ್ಧಿ / intellegience ಬುದ್ಧಿಯ ಪ್ರಭಾವ.
ಪ್ರತಿಯೊಂದು ಪ್ರಾಣಿ, ಪಕ್ಷಿ, ಕ್ರಿಮಿ ಕೀಟಗಳಲ್ಲಿ ಒಂದೊಂದು ರೀತಿಯ ಬುದ್ಧಿ ಪ್ರಕಟವಾಗಿದೆ.
ಯಾವ ರೀತಿಯ ಪ್ರಾಣಿ ವರ್ಗಗಳಿಗೂ ಬುದ್ಧಿಶಕ್ತಿ ವಂಚಿತವಾಗಿಲ್ಲ.
ಒಂದು ಚಿಟ್ಟೆ ಇರಬಹುದು, ಪಕ್ಷಿ ಇರಬಹುದು ಪ್ರತಿಯೊಂದು ಜೀವರಾಶಿಗಳಲ್ಲಿ ಅವರದೇ ಆದ ಒಂದು ಬುದ್ಧಿ intellegience ಇದೆ.

ಅದರ ಬುದ್ಧಿಮತ್ತೆಯಿಂದ ಬದುಕುತ್ತಿರುತ್ತದೆ, ಓಡಾಡುತ್ತಿರುತ್ತದೆ, ಹಾರಾಡುತ್ತಿರುತ್ತದೆ, ತೇಲಾಡುತ್ತಿರುತ್ತದೆ, ಈಜಾಡುತ್ತಿರುತ್ತದೆ, ಸೂರ್ಯನ ಕಿರಣಗಳನ್ನು ನೋಡಿ ಹೇಗೆ ಹೇಳಬೇಕು ಹೇಗೆ ಮಲಗಬೇಕು ಹೇಗೆ ಕೆಲಸ ಮಾಡಬೇಕೆಂಬ ಬುದ್ಧಿಯು ಇದೆ.
ಆದರೆ ಮನುಷ್ಯನಲ್ಲಿ ದೇವಿಯ ಚೇತನ ಶಕ್ತಿ ಬಹಳ ಅಸೀಮ ವಾಗಿದೆ (ವಿಕಾಸ) ಅನಿಶ್ಚಿತವಾಗಿದೆ.

ಆದರೆ ಪ್ರಾಣಿ ಪಕ್ಷಿಗಳಲ್ಲಿ ಚೇತನಶಕ್ತಿ ನಿಶ್ಚಿತವಾದ ರೂಪವಾಗಿರುತ್ತದೆ, ಆದರೆ ಅನಿಶ್ಚಿತವಾದ ಬುದ್ಧಿಯಲ್ಲಿ ಮನುಷ್ಯನು ಸೇರಿಕೊಂಡಿರುತ್ತಾನೆ. ಆದ್ದರಿಂದ ನೀವು ಏನಾದರೂ ಮಾಡಬಹುದು, ಬೇಕಾದ್ದನ್ನು ಮಾಡಬಹುದು, ಮಾಡದೇನು ಇರಬಹುದು, ಸುಮ್ಮನೆಯು ಇರಬಹುದು. ಮನುಷ್ಯನ

ಬುದ್ಧಿಯ ವಿಕಾಸವನ್ನು ನೀವೆಲ್ಲರೂ ನೋಡುತ್ತಲೇ ಇದ್ದೇವೆ, ಜ್ಞಾನ ವಿಜ್ಞಾನ ಸುಜ್ಞಾನ ಮಹಾಜ್ಞಾನ ದಿವ್ಯಜ್ಞಾನ ಹೀಗೆ ಹಲವಾರು ರೀತಿಯ ಬುದ್ಧಿಯಿಂದ ವಿಕಾಸಿತ ನಾಗುತ್ತಾನೋ, ಅದನ್ನು ಊಹಿಸಲು ಕಲ್ಪನೆ ಮಾಡಲು ಅಸಾಧ್ಯ.

ದೇವಿ ಶಕ್ತಿಯು ಮನುಷ್ಯನ ಒಳಗೆ ತನ್ನ ಅಪಾರ ಚೇತನ ಶಕ್ತಿಯನ್ನು ಪರಿಪೂರ್ಣವಾಗಿ ಪ್ರಕಟವಾಗಿರುತ್ತಾಳೆ. ಆಗ ಬುದ್ಧಿ ಪ್ರಕಟವಾಗಿ ಸಕ್ರಿಯ ವಾಗಲು ಪ್ರಾರಂಭವಾಗುತ್ತಾಳೆ.
ಈಗ ಈ ಸೂತ್ರದ ಪ್ರಕಾರ ದೇವಿಯ ಸಾಧನೆಯನ್ನು ಹೇಗೆ ಮಾಡಬೇಕೆಂದರೆ, ನಿರ್ಬುದ್ಧಿ ಯನ್ನು, ಜಡತ್ವವನ್ನು, ಕುಬುದ್ಧಿ ಯನ್ನು, ನಿಲ್ಲಿಸುವುದು (stop)
ಅಂಧ ವಿಶ್ವಾಸಗಳ ಧಾರಣೆ, ಮತ ಮಾನ್ಯತೆಗಳಿಂದ ಹೊರಗೆ ಬರುವುದು.

ಯಾವಾಗ ದೇವಿ ಶಕ್ತಿಯ ಜೊತೆಯಲ್ಲಿ ಇದ್ದೇನೆ ಎಂದು ಕೊಂಡಾಗ, ನಾನು ಬುದ್ಧಿಯ ಜೊತೆಗೆ ಸೇರಿದ್ದೇನೆ ಎಂದು ಅರ್ಥಮಾಡಿಕೊಂಡು ತಿಳಿದು ಕೊಂಡಾಗ ಮಾತ್ರ ದೇವಿಯು ಬುದ್ಧಿ ರೂಪದಲ್ಲಿ ನಮ್ಮೊಳಗೆ ವಿರಾಜಮಾನನಾಗಿದ್ದ ಎನ್ನುವ ಅರ್ಥ.
ಆದರೆ ಕೆಲವು ಸಂಘಟಿತ ಧರ್ಮಗಳನ್ನು ನೋಡಿದರೆ ಭಯವಾಗುತ್ತದೆ, ಅಲ್ಲಿ ಮಾತುಗಳು ಬಹಳ ಜೋರಾಗಿ ಜಬರ್ದಸ್ತ್ ಆಗಿರುತ್ತದೆ. ಅಲ್ಲಿ ಜ್ಞಾನವನ್ನು ಕೊಡುವುದಕ್ಕೆ ಆಯೋಜಿಸಲಾಗಿರುತ್ತದೆ (satsanga).

ಆದರೆ ಒಂದು ವಿಚಾರವನ್ನು ಗಮನಿಸಿದರೆ ಸಣ್ಣ ಮನಸ್ಥಿತಿಯಲ್ಲಿ (narrow mind) ಅವರದೇ ಆದ ಒಂದು ಸಂಘ (cult), ಆರಾಧನೆ ಹಾಗೂ ಅವರದೇ ಒಂದು ವ್ಯವಸ್ಥೆ ಇರುತ್ತದೆ.

ಇದರಲ್ಲಿ ನಮ್ಮ ಮುಂದಿನ ಯಾತ್ರೆಯನ್ನು, ಆಧ್ಯಾತ್ಮಿಕ ಜರ್ನಿಯನ್ನು ಕುಂಠಿತಗೊಳಿಸುತ್ತರೆ. ನಿಮ್ಮ ಬುದ್ಧಿಯ ವಿಕಾಸವನ್ನು ನಿಲ್ಲಿಸಿ, ಸಮಾಪ್ತಿ ಗೊಳಿಸಿ, ನಿಮ್ಮ ಬುದ್ಧಿಯನ್ನು ಹೊರಗಡೆ ಇಟ್ಟು ಬನ್ನಿ ಎಂದು ಹೇಳುತ್ತಾರೆ.
ಯಾವಾಗ ನಿಮ್ಮ ಬುದ್ಧಿ ಸಮಾಪ್ತಿಯಾಗುತ್ತದೆ ಆಗ ನಿಮ್ಮ ಆಧ್ಯಾತ್ಮಿಕ ಜರ್ನಿ ಶುರುವಾಗುತ್ತದೆ ಅಂತ ಹೇಳ್ತಾರೆ.

ಆದರೆ ನಿಮ್ಮ ಬುದ್ಧಿಶಕ್ತಿ ಸಮಾಪ್ತ ವಾಗುತ್ತೊ, ಆ ಕ್ಷಣ ದೇವಿಯ ಶಕ್ತಿಯು ಸಮಾಪ್ತ ವಾಗುತ್ತದೆ. ಯಾಕೆಂದರೆ ಬುದ್ಧಿಯ ರೂಪದಲ್ಲಿ ಆ ಮಹಾ ಚೈತನ್ಯ ಶಕ್ತಿಯೇ ಪ್ರಕಟವಾಗಿದ್ದಾಳೆ.

ಸಂಪ್ರದಾಯಗಳು ಶೋಷಣೆಗಳು, ಸಂಘಟನೆಗಳು, ಇದೆಲ್ಲವೂ ಮನುಷ್ಯನ ಬುದ್ಧಿಯನ್ನು ಕಡಿಮೆ ಮಾಡುವ ಪ್ರಯತ್ನವಾಗಿರುತ್ತದೆ.

ಆದ್ದರಿಂದ ಬುದ್ಧಿಯನ್ನು ನಾಶ ಮಾಡಬಾರದು, ಬುದ್ಧಿಯನ್ನು ವಿಕಾಸ ಮಾಡಬೇಕು, ಬುದ್ಧಿ ಅನ್ನುವುದು ಬಹಳ ಸುಂದರವಾದ ಒಂದು ವಸ್ತು.

ಒಬ್ಬ ಸಾಧಕನ ಬುದ್ಧಿಶಕ್ತಿ ಬಹಳ ಜಾಗರೂಕತೆಯಿಂದ ಇರಬೇಕು, ಜಾಗರೂಕ ರಾಗದಿದ್ದರೆ ನಾವು ಸಹ ನಿದ್ರಾವಸ್ಥೆಯಲ್ಲಿರುವ: ಗಿಡ, ಮರ, ಪ್ರಾಣಿ, ಪಶು, ಹೀಗೆ ಹಲವಾರು ವನ್ಯಮೃಗಗಳ ಜೀವಿಗಳಂತೆ ನಿದ್ರಾವಸ್ಥೆಯಲ್ಲೇ ಇದ್ದು ಬಿಡುತ್ತೇವೆ.
ಆದ್ದರಿಂದ ಜಾಗರೂಕರಾಗಿ, ಎಚ್ಚರದಿಂದಿರಿ, ಹೇಳಿ ಎದ್ದೇಳಿ ಆಧ್ಯಾತ್ಮಿಕ ದಾರಿಯಲ್ಲಿ ನಡೆಯಿರಿ, ನಿಮ್ಮ ಆಧ್ಯಾತ್ಮಿಕದ ಗುರಿಯನ್ನು ಮುಟ್ಟಿ, ಮುಂದೆ ಮುಂದೆ ನಡೆಯುತ್ತಾ ಜಯಶೀಲರಾಗಿ.
ಈ ಸೂತ್ರವೇ:

ಓಂ ನಮಃ ಚಂಡಿಕಾಯೈ · ಓಂ ದುರ್ಗಾರ್ಪಣಮಸ್ತು

DEVI STUTI · SUTRA 4 OF 23

The Grace of Sleep

ನಿದ್ರಾ · Nidra

ಯಾ ದೇವೀ ಸರ್ವಭೂತೇಷು ನಿದ್ರಾರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ

Yā devī sarvabhūteṣu nidrārūpeṇa saṃsthitā
Namastasyai namastasyai namastasyai namo namaḥ

> Guruji's Devi Stuti talks, in Kannada: the YouTube playlist

That Devi who abides in all beings, for a lifetime, in every form of

sleep: salutations to Her, again and again.

The power of this great Devi dwells in all creatures of the world in the form of sleep. To Her our salutations, salutations, every time salutations.

The meaning of this sutra: we can notice the Devi's power spread through every living being.

Within a seeker there is a web of ambition, and this power frees us from the confusion of spiritual dualities (liberation, clarity). It also helps us understand all the divine stages and levels of life.

The sutra says that the Devi's power is present in all beings in the form of sleep.

Sleep can be understood in many ways. There is long, deep physical sleep, which happens in the body and is felt there. If sleep does not come, the body gets no rest. It does not heal and has no chance to rejuvenate. So sleep is essential for this body.

Some people, caught in the illusions of life, suffer even in their physical sleep. They believe they should cut down on sleep as much as possible.

Today physiology and psychology have told us clearly, through research, that after about three hours of alert waking we should sleep for an hour, or become empty and relax. Then body and mind stay in balance.

We all know how important physical sleep is. In the same way, mental sleep, emotional sleep and spiritual sleep work at many levels and help release the stress inside us.

This sutra says that the Devi's state dwells here, and this is Her form. Here we must be with Her in faith, without fighting our dualities.

Every seeker, every traveller on the spiritual path, should search for this power gently, with good conduct and attention, and should come out of unnatural states. (One should not stay in unawareness, in an unconscious state.) Come out of the unconscious state; come out of unawareness.

But you keep fighting and struggling with these states, as if they were all unwanted. That is a misunderstanding.

Whatever you are searching for in your spiritual sleep, even the searching itself is good in its way, because through searching one can receive the vision of the Adi Shakti.

This means that because the power lies merged within sleep, we can watch how it works and what it does. This is called the waking state, the

awakening state.

Saying namaste, namaste again and again means: be humble. Do not fight your own unconscious or anyone else's, and do not attack it. After you wake up, do not condemn those still asleep.

They need their sleep too; that is why they are still asleep.

When you wake up, do not shake everyone out of sleep and make a commotion. That is improper and not good. It interferes with the Devi's own work.

Spiritual teachers say this is spiritual sleep: such people are searching without knowing it, in unconsciousness and unawareness. In their body and mind, the Devi's power is expressing itself clearly as consciousness (manifestation), and that power is working in its own way through them.

So one must sleep properly and wake properly, with awareness. Only a mother can put a child to sleep. She knows that only a child who has slept well can wake up calm, cheerful and at ease.

If someone is woken before they have slept enough, then when their spiritual journey begins they may seem awake yet keep dreaming (a daydreamer).

Many seekers, many spiritual people and teachers, live in exactly this dream state. Having forced themselves awake, they go on experiencing a dream. This is very dangerous.

Sleep too is a form of the Devi. Even in the unnatural, unconscious state the Devi's power is present, so we should have the feeling of bowing to Her, and receptivity.

How does physical sleep come? Without worries and without thoughts, we fall asleep on our own, and in the same way we wake up on our own.

The sutra says that certain bad experiences, harsh insults, wrongs and events snap like a rope or a thread and break away.

The power of the Divine Mother is not condemnation. It is not filling our minds with guilt. The Devi's power simply does its own work. It is a power and nothing else, the Feminine Mystery, the secret of the Adi Shakti.

This Feminine Mystery is not about worship, waving the lamp, decorating the deity or many other rituals. Accept this power. Whatever path you are walking, accept it and build a good road for yourself. When your sleep is complete, move forward on the good path. Press ahead.

On one side the journey begins in sleep; on the other side the journey of wakefulness begins.

Those who travel in wakefulness should not condemn those who travel in sleep.

Those who are asleep do not know or notice those who are awake. So even when you are awake, stop worrying about those who are asleep.

Walk your spiritual path with awareness.

ನಿದ್ರಾ

ಈ ಮಹಾದೇವಿಯ ಶಕ್ತಿ ಸಂಸಾರದ ಸಕಲ ಪ್ರಾಣಿಗಳಲ್ಲಿ ನಿದ್ರಾ ರೂಪದಲ್ಲಿದೆ.
ಆಕೆಗೆ ನಮ್ಮ ನಮಸ್ಕಾರಗಳು ನಮಸ್ಕಾರಗಳು, ಪ್ರತಿ ಬಾರಿ - ಬಾರಿಯೂ ನಮಸ್ಕಾರಗಳು. ||
ಈ ಸೂತ್ರದ ಅರ್ಥ: ಪ್ರತಿ ಜೀವರಾಶಿಗಳಲ್ಲಿ ವ್ಯಾಪಕವಾಗಿ ದೇವಿ ಶಕ್ತಿ ಇರುವುದನ್ನು ಗಮನಿಸಬಹುದು.
ಹೇಗೆಂದರೆ, ಒಬ್ಬ ಸಾಧಕ ನಲ್ಲಿ ಮಹತ್ವಾಕಾಂಕ್ಷೆಯ ಒಂದು ಜಾಲವಿದೆಯೋ ಹಾಗೂ ಆಧ್ಯಾತ್ಮಿಕ ದ್ವಂದ್ವತೆಯ ಗೊಂದಲಗಳಿಂದ ನಮ್ಮನ್ನು ಮುಕ್ತಿ / ಬಿಡುಗಡೆ ಗೊಳಿಸುತ್ತದೆ. (Liberatation / clarity)
ಹಾಗೂ ಜೀವನದ ದಿವ್ಯವಾದ ಎಲ್ಲಾ ಹಂತಗಳನ್ನು, ಮಜಲುಗಳನ್ನು ನಮಗೆ ಅರ್ಥ ಮಾಡಿಸುತ್ತದೆ.
ಸೂತ್ರ ಹೇಳುತ್ತದೆ: ಸಕಲ ಜೀವರಾಶಿಗಳಲ್ಲಿ ದೇವಿ ಶಕ್ತಿಯು ನಿದ್ರಾ ರೂಪದಲ್ಲಿ ವಿದ್ಯಮಾನವಾಗಿದೆ.
ಈ ನಿದ್ರೆಯ ಅರ್ಥ ಹಲವಾರು ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು, ಹೇಗೆಂದರೆ ಒಂದು ದೊಡ್ಡದಾದ ಗಾಢವಾದ ಶಾರೀರಿಕ ನಿದ್ರೆ, ಇಂತಹ ನಿದ್ರೆ ಶಾರೀರಿಕವಾಗಿ ಘಟಿಸಿ ಅನುಭವಿಸುವುದು / ಅನುಭವಿಸಲು ಬಹುದು
ಅಥವಾ ನಿದ್ರೆ ಬರದಿದ್ದರೆ, ಸ್ವಯಂ ಶರೀರದ ಆರಾಮವು ಪಡೆಯುವುದಿಲ್ಲ / ಸಿಗುವುದಿಲ್ಲ. ಹಾಗೂ ಶರೀರ ಸ್ವಾಸ್ಥವನ್ನು ಪಡೆಯುವುದಿಲ್ಲ (heal), ಪುನರ್ ಜೀವಿಸುವುದಕ್ಕೆ (rejunuvate) ಅವಕಾಶ ಸಿಗುವುದಿಲ್ಲ. ಆದ್ದರಿಂದ ನಿದ್ರೆ ಈ ಶರೀರಕ್ಕೆ ಬಹಳ ಅತ್ಯವಶ್ಯಕ. (Important).

ಕೆಲವರು ಜೀವನದ ಮಾಯಾಜಾಲದಲ್ಲಿ ಸಿಕ್ಕಿಹಾಕಿಕೊಂಡು ಶಾರೀರಿಕ ನಿದ್ರೆಯಿಂದಲೂ ಬಳಲುತ್ತಿರುತ್ತಾರೆ. ಅಂತಹವರು ತಾನು ಆದಷ್ಟು ನಿದ್ರೆ ಕಡಿಮೆ ಮಾಡಬೇಕೆಂದು ಅರ್ಥ ಮಾಡಿಕೊಂಡಿರುತ್ತಾರೆ / ತಿಳಿದುಕೊಂಡಿರುತ್ತಾರೆ.
ಈ ದಿನಗಳಲ್ಲಿ ಶಾರೀರಿಕ ವಿಜ್ಞಾನ, ಮನೋವಿಜ್ಞಾನವು, ಸಂಶೋಧನೆಗಳಿಂದ ನಮಗೆ ಸ್ಪಷ್ಟವಾಗಿ ಹೇಳಲ್ಪಟ್ಟಿದೆ, ಏನೆಂದರೆ ಮೂರು ಗಂಟೆಗಳು ಎಚ್ಚರದಿಂದ ಜಾಗರೂಕರಾದ ಮೇಲೆ ಮತ್ತೆ ಒಂದು ಗಂಟೆ ನಿದ್ರೆ ಮಾಡಬೇಕು ಅಥವಾ ಶೂನ್ಯ ವಾಗಿರಬೇಕು. (Relax). ಆಗ ಈ ಶರೀರ ಮತ್ತು ಮನಸ್ಸು ಸಮತೋಲನವಾಗಿರುತ್ತದೆ.
ಆದರೆ ಶಾರೀರಿಕ ನಿದ್ರೆಯು ಎಷ್ಟು ಮಹತ್ವವಾಗಿದೆ ಎಂದು ನಮಗೆಲ್ಲ ಗೊತ್ತಿದೆ, ಅದೇ ರೀತಿ ಮಾನಸಿಕವಾದ ನಿದ್ರೆ, ಮತ್ತು ಭಾವಾತ್ಮಕ ನಿದ್ರೆ, ಮತ್ತು ಆಧ್ಯಾತ್ಮಿಕ ನಿದ್ರೆ, ಈ ನಿದ್ರಾವಸ್ತೆಗಳು

ಹಲವಾರು ರೀತಿಯ ಮಜಲುಗಳನ್ನು, ನಮ್ಮೊಳಗಿನ ಒತ್ತಡಗಳನ್ನು (stress), ಬಿಡುಗಡೆಗೊಳಿಸಲು ಸಹಾಯ ಮಾಡುತ್ತದೆ.

ಈ ಸೂತ್ರ ಹೇಳುತ್ತದೆ: ದೇವಿಯ ಸ್ಥಿತಿಯೇ ಇಲ್ಲಿ ವಾಸವಾಗಿದೆ ಹಾಗೂ ಆಕೆಯ ರೂಪವು ಇದೆ ಆಗಿದೆ. ಇಲ್ಲಿ ನಾವುಗಳು ಆಕೆಯ ಜೊತೆ ಶ್ರದ್ಧಾಪೂರಕವಾಗಿರಬೇಕು, ದ್ವಂದ್ವಗಳ ಬಡಿದಾಟಗಳು ಮಾಡಕೂಡದು.
ಪ್ರತಿಯೊಬ್ಬ ಸಾಧಕ ಹಾಗೂ ಪ್ರತಿಯೊಬ್ಬ ಆಧ್ಯಾತ್ಮಿಕದ ಯಾತ್ರಿಕನು ಶಕ್ತಿಯನ್ನು ಹುಡುಕಾಡುವಾಗ ಬಹಳ ಸೌಮ್ಯದಿಂದ, ಒಳ್ಳೆಯ ರೀತಿಯ ವ್ಯವಹಾರದಿಂದ ಗಮನಿಸುತ್ತಾ ಇರಬೇಕು. ಅಸಹಜ ಸ್ಥಿತಿಯಿಂದ ಹೊರಗಡೆ ಬರಬೇಕು.
(one should not be in unwareness / unconscious state).
Unconscious state ನಿಂದ ಹೊರಗಡೆ ಬರಬೇಕು, unwareness state ನಿಂದ ಹೊರಗಡೆ ಬರಬೇಕು

ಆದರೆ ನೀವು ಸ್ಥಿತಿಗಳ ಜೊತೆ ಹೊಡೆದಾಡಿ ಬಡಿದಾಡುತ್ತಿರುತ್ತೀರ ಇದೆಲ್ಲವೂ ನಿಮಗೆ ಬೇಡವಾದದ್ದು ಇದೊಂದು ತಪ್ಪು ತಿಳುವಳಿಕೆ.
ನೀವು ಆಧ್ಯಾತ್ಮಿಕ ನಿದ್ರೆಯಲ್ಲಿ ಏನನ್ನು ಹುಡುಕುತ್ತಿರುತ್ತಿರೋ, ಅದನ್ನು ಹಾಗೆ ಹುಡುಕಾಡುವುದು ಸಹ ಒಂದು ರೀತಿ ಒಳ್ಳೆಯದೇ.
ಏಕೆಂದರೆ ಹುಡುಕಾಡುವುದರಿಂದ ಆದಿಶಕ್ತಿಯ ದರ್ಶನವನ್ನು ಪಡೆಯಬಹುದು.
ಇದರ ಅರ್ಥವೇನೆಂದರೆ, ಆ ಶಕ್ತಿಯು ನಿದ್ರೆಯಲ್ಲೇ ಲೀನವಾಗಿರುವುದರಿಂದ (merge) ಶಕ್ತಿಯ ಕಾರ್ಯ ವೈಖರಿಗಳನ್ನು, ಅದರ ಚಟುವಟಿಕೆಗಳನ್ನು ನೋಡಬಹುದು. ಇದನ್ನೇ ಜಾಗೃತಾವಸ್ಥೆ / awakening state ಅಂತ ಹೇಳುವುದು.
ಹಾಗೂ ಪದೇಪದೇ ನಮಸ್ತೆ ನಮಸ್ತೆ ಅಂತ ಹೇಳುವ ಅರ್ಥ ವಿನಮ್ರತೆಯಿಂದ ಇರಿ ಎಂದು ಹೇಳುವ ಅರ್ಥ.

ನಿಮ್ಮ ಅಚೇತನ ವನ್ನು ಹಾಗೂ ಮತ್ತೊಂದು ಬೇರೆಯವರ ಅಚೇತನದ ಜೊತೆ ಹೊಡೆದಾಡಬೇಡಿ (fight) ಆಕ್ರಮಣ ಮಾಡಬೇಡಿ, ನೀವು ಜಾಗೃತವಾದ ನಂತರ ನಿದ್ರಾವಸ್ಥೆಯಲ್ಲಿರುವವರನ್ನು ನಿಂದನೆ ಮಾಡಬೇಡಿ.
ಅವರಿಗೂ ನಿದ್ರೆಯ ಅವಶ್ಯಕತೆ ಇದೆ. ಆದ್ದರಿಂದ ಅವರು ಸಹ ನಿದ್ರಾವಸ್ಥೆಯಲ್ಲಿಯೇ ಮಲಗಿದ್ದಾರೆ.

ಆದರೆ ನೀವು ಎಚ್ಚರವಾದ ಮೇಲೆ ಎಲ್ಲರನ್ನು ನಿದ್ರೆಯಿಂದ ಬಡಿದು ಎಬ್ಬಿಸಿ ಗಲಾಟೆ ಮಾಡಬೇಡಿ. ಅದು ಅನುಚಿತವಾದದ್ದು, ಒಳ್ಳೆಯದಲ್ಲ, ಅಲ್ಲೂ ಸಹ ಆ ದೇವಿಯ ಕಾರ್ಯ ವ್ಯಾಪಾರದಲ್ಲಿ ಹಸ್ತಕ್ಷೇಪ ಮಾಡಿದ್ದಾಳೆ.
ಆದ್ದರಿಂದ ಆಧ್ಯಾತ್ಮಿಕ ಗುರುಗಳು ಹೇಳುತ್ತಾರೆ ಇದೇ ಆಧ್ಯಾತ್ಮಿಕ ನಿದ್ದೆ ಎಂದ್ದು, ಅಂತವರಿಗೆ ತಿಳಿಯದೆ ಹುಡುಕಾಟ ನಡೆಸುತ್ತಿದ್ದಾರೆ, unconsciousness / unawareness

ಈ ಶರೀರದಲ್ಲಿ, ಮನಸ್ಸಿನಲ್ಲಿ ಆ ದೇವಿ ಶಕ್ತಿಯ ಚೇತನದ ಅಭಿವ್ಯಕ್ತಿಯಾಗಿ ಸ್ಪಷ್ಟತೆಯಿಂದ (manifestation) ಅವರದೇ ಆದ ರೀತಿಯಲ್ಲಿ ಆ ಶಕ್ತಿ ಕೆಲಸ ಮಾಡುತ್ತಾ ಇದೆ.
ಆದ್ದರಿಂದ ಸರಿಯಾಗಿ ನಿದ್ರೆಯನ್ನು ಮಾಡಬೇಕು ಹಾಗೂ ಸರಿಯಾದ ರೀತಿ ಎಚ್ಚರಿಕೆಯಿಂದ ಏಳಬೇಕು. ಏಕೆಂದರೆ ಒಬ್ಬ ತಾಯಿ ಮಾತ್ರ ಮಗುವನ್ನು ನಿದ್ರೆ ಮಾಡಿಸಲು ಸಾಧ್ಯ. ಆಕೆಗೆ ಗೊತ್ತು ಸರಿಯಾಗಿ ನಿದ್ರೆ ಮಾಡಿಸಿದರೆನೇ, ಶಾಂತತೆಯಿಂದ, ಪ್ರಸನ್ನತೆಯಿಂದ, ನೆಮ್ಮದಿಯಿಂದ ನಿದ್ರೆಯಿಂದ ಎಚ್ಚರವಾಗಲು ಸಾಧ್ಯ.

ಸರಿಯಾಗಿ ನಿದ್ರೆ ಮಾಡಲು ಬಿಡದೆ ಎಚ್ಚರಿಸಲು ಶುರು ಮಾಡಿದರೆ ಅಂತಹ ವ್ಯಕ್ತಿ ಆಧ್ಯಾತ್ಮಿಕದ ಯಾತ್ರೆ ಪ್ರಾರಂಭವಾದಾಗ, ಆ ವ್ಯಕ್ತಿ ಜಾಗೃತ ವಾದರೂ (awaken) ಸ್ವಪ್ನ ವನ್ನೇ ನೋಡುತ್ತಿರುತ್ತಾನೆ (day dreamer / ಹಗಲು ಕನಸು)

ಹಲವಾರು ಸಾಧಕರು, ಹಲವಾರು ಆಧ್ಯಾತ್ಮಿಕ ಮಹನೀಯರು, ಗುರುಗಳು, ಇಂತಹ ಸ್ವಪ್ನ ಅವಸ್ಥೆಯ ಅನುಭವವನ್ನೇ ಪಡೆಯುತ್ತಿರುತ್ತಾರೆ.

ಜಾಗೃತ ಸ್ಥಿತಿಯನ್ನು ಬಲವಂತದಿಂದ ಎಚ್ಚರಿಸಿ ಸ್ವಪ್ನ ಅವಸ್ಥೆಯಲ್ಲಿ ಇರುವುದನ್ನೇ ಅನುಭವಿಸುತ್ತಿರುತ್ತಾರೆ, ಇದು ಬಹಳ ಅಪಾಯಕಾರಿ.

ನಿದ್ರೆಯು ಸಹ ದೇವಿಯ ಒಂದು ರೂಪ, ಇಲ್ಲೂ ಸಹ ಅಸಹಜ ಸ್ಥಿತಿಯಲ್ಲಿ, ಅಚೇತನ ಸ್ಥಿತಿಯಲ್ಲಿ, ದೇವಿಯ ಶಕ್ತಿ ಇರುವುದರಿಂದ ಆಕೆಗೆ ನಮಸ್ಕರಿಸುವ ಭಾವನೆ ಹಾಗೂ ಗ್ರಹಣ ಶೀಲತೆ ಇರಬೇಕು.

ಶಾರೀರಿಕ ನಿದ್ರೆ ಹೇಗೆ ಬರುತ್ತದೆ?:
ಯಾವುದೇ ಚಿಂತೆಗಳಿಲ್ಲದೆ, ಯಾವುದೇ ಆಲೋಚನೆಗಳಿಲ್ಲದೆ, ತನಗೆ ತಾನೇ ನಿದ್ರಾವಸ್ಥೆಯಲ್ಲಿ ಇರುತ್ತೇವೆ, ಹಾಗೆ ತನಗೆ ತಾನೇ ಎಚ್ಚರಿಕೆಯನ್ನು ಪಡೆಯುತ್ತಾನೆ.

ಸೂತ್ರ ಹೇಳುತ್ತದೆ:
ಕೆಲವು ಕೆಟ್ಟ ಅನುಭವಗಳು, ಕೆಲವು ಕೆಟ್ಟ ನಿಂದನೆಗಳು, ಅಪರಾಧಗಳು, ಘಟನೆಗಳು ಹಗ್ಗದಂತೆ

ಅಥವಾ ದಾರದ ಹಾಗೆ ತುಂಡಾಗಿ ಕಿತ್ತು ಹೋಗುತ್ತದೆ / ತುಂಡಾಗಿ ಹೋಗುತ್ತದೆ
ದೇವಿ ಮಾತೆಯ ಶಕ್ತಿಯೆಂದರೆ ನಿಂದನೆ ಅಲ್ಲ,
ನಮ್ಮ ಬುದ್ಧಿಯಲ್ಲಿ ಅಪರಾಧಗಳನ್ನು ತುಂಬಿಸುವುದು ಅಲ್ಲ,
ಆ ದೇವಿ ಶಕ್ತಿ ತನ್ನ ಕೆಲಸ ಮಾತ್ರ ಮಾಡ್ತಾ ಇರುತ್ತಾಳೆ,
ಅದು ಒಂದು ಶಕ್ತಿ ಮಾತ್ರ (Feminie Mystery) ಆದಿಶಕ್ತಿಯ ರಹಸ್ಯ.

ಈ ಆದಿಶಕ್ತಿಯ ರಹಸ್ಯ ಅಂದರೆ (Feminie Mystery): ಅದನ್ನು ಪೂಜೆ ಮಾಡೋದು, ಆರತಿ ಬೆಳಗುವುದು, ಅಲಂಕಾರ ಮಾಡೋದು, ಇನ್ನು ಹಲವಾರು ವಿಧಿಗಳು ಅಂತ ಅಲ್ಲ, ಈ ಶಕ್ತಿಯನ್ನು ಸ್ವೀಕಾರ ಮಾಡು (accept) ಯಾವ ದಾರಿಯಲ್ಲಿ ನಡೆಯುತ್ತಿರುರುವಿರೋ, ಅದನ್ನು ಸ್ವೀಕರಿಸಿ ಒಳ್ಳೆಯ ದಾರಿಯನ್ನು ನಿರ್ಮಿಸಿಕೊಳ್ಳಿ. ಯಾವ ಸಮಯದಲ್ಲಿ ನಿಮ್ಮ ನಿದ್ರೆ ಪೂರ್ತಿಯಾದ ಮೇಲೆ, ಒಳ್ಳೆಯ ಮಾರ್ಗದಲ್ಲಿ ಮುನ್ನಡೆಯಿರಿ, ಮುನ್ನುಗ್ಗಿ.

ಒಂದು ಕಡೆ ನಿದ್ರೆಯಲ್ಲಿ ಪ್ರಯಾಣ (journey) ಶುರುವಾಗುತ್ತದೆ, ಇನ್ನೊಂದು ಕಡೆ ಜಾಗೃತಾವಸ್ಥೆಯ ಪ್ರಯಾಣ ಶುರುವಾಗುತ್ತದೆ.
ಜಾಗೃತಾವಸ್ಥೆಯಿಂದ ಪ್ರಯಾಣ ಮಾಡುವವರು, ನಿದ್ರಾವಸ್ಥೆಯಿಂದ ಪ್ರಯಾಣಿಸುವವರನ್ನು ನಿಂದಿಸಬೇಡಿ.

ಯಾರು ನಿದ್ರಾವಸ್ಥೆಯಲ್ಲಿರುವರೋ, ಅಂತವರಿಗೆ ಜಾಗೃತಾವಸ್ಥೆಯಲ್ಲಿ ಇರುವವರ ಬಗ್ಗೆ ತಿಳಿಯುವುದಿಲ್ಲ / ಗಮನಿಸುವುದಿಲ್ಲ, ಆದ್ದರಿಂದ ಜಾಗೃತಾವಸ್ಥೆಯಲ್ಲಿ ಎಚ್ಚರವಾದರೂ ನಿದ್ರಾವಸ್ಥೆಯಲ್ಲಿರುವವರ ಚಿಂತೆಯನ್ನು ಬಿಟ್ಟುಬಿಡಿ.
ನಿಮ್ಮ ಆಧ್ಯಾತ್ಮಿಕ ದಾರಿಯನ್ನು ಎಚ್ಚರಿಕೆಯಿಂದ ಮುನ್ನಡೆಯಿರಿ.

ಓಂ ನಮಃ ಚಂಡಿಕಾಯೈ · ಓಂ ದುರ್ಗಾರ್ಪಣಮಸ್ತು

DEVI STUTI · SUTRA 5 OF 23

The Sacred Hunger

ಕ್ಷುಧಾ · Kshudha

ಯಾ ದೇವೀ ಸರ್ವಭೂತೇಷು ಕ್ಷುಧಾರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ

Yā devī sarvabhūteṣu kṣudhārūpeṇa saṃsthitā
Namastasyai namastasyai namastasyai namo namaḥ

> Guruji's Devi Stuti talks, in Kannada: the YouTube playlist

That Devi who abides in all beings, for a lifetime, in every form of

hunger: salutations to Her, again and again.

This Devi Shakti is present in every class of creature in the world in the form of hunger. To Her, salutations, salutations, every time salutations.

Just as sleep is essential in our life, hunger too is essential within us.

Hunger is not something we produce. Hunger is self-born; it happens on its own.

We can soothe hunger, but hunger itself is the Adi Shakti appearing in form.

Just as there are many kinds of sleep, hunger too takes many shapes.

Hunger does not arise simply from the condition of the body. Food may be right in front of us and still we feel no hunger. Hunger too is a play of the Adi Shakti.

This is what we call the Mother power, the Mother. In that state she appears as the power of hunger. It happens by itself. (It is happening.)

There are many kinds of hunger: mental hunger, emotional hunger, spiritual hunger and many more.

But does everyone have the hunger for knowledge, or will it come to everyone? We do not know.

Yet the flow of knowledge keeps running (the supply). Many people keep the stream of knowledge flowing. But anyone in whom the hunger for knowledge truly arises is different from others. That person has received the grace of the Adi Shakti, received as prasada in the flow of what She gives.

If someone has a spiritual hunger for meditation, no one else can produce it in them or plant it. Others can teach certain meditations and methods.

In the spiritual world, knowledge cannot be stuffed in through the mouth like food. If it is served by cramming and forcing it in, then once the mouth is full people cry out, resist and rebel.

They cannot swallow it. There is no hunger there, because the Adi Shakti's play and grace have not yet begun in them.

Some hold satsangs, spread the word, meditate and practise, and after filling themselves with all this, their bodies are turned upside down. Some turn knowledge and meditation upside down too, and so the whole spiritual world has been filled with such confusion.

According to this sutra, this is the domain of the Adi Shakti. Surrender to that power.

Where is the domain of the Adi Shakti? In the digestive fire, jatharagni.

When we speak of hunger, we see the digestive fire within our body. Jathara is the fire, the flame, that arises in the stomach.

This fire melts and digests our food, and having digested it, produces the essence that flows through the body.

In the same way, when the hunger for knowledge comes, an inner fire arises and digests knowledge, meditation and practice. It produces essence (rasasiddhi) in our body and life and holds the ripeness of knowledge (purity and purification).

Then we do not turn meditation upside down or give sermons. We live in the way of meditation and knowledge.

Food placed in the stomach does not stay as it is. It is digested and disappears. It becomes active, and we understand what action is. We notice the digestion; we notice the body filling with energy and coming alive. In the same way, we notice the Devi's living power becoming manifest.

So when the hunger for knowledge and meditation comes, that too is digested and becomes essence.

Once this essence has formed, what we come to know is peace, cheerfulness, love, contentment, equanimity and abiding in oneself.

But after all this is attained, one does not preach that knowledge has come or analyse it intellectually.

What one receives there is love, peace, an inward cheerfulness, a rhythmic life, a glimpse, a steadiness in oneself.

From this we understand: there was hunger, and now it is at peace. So keep waiting for the hunger for knowledge. Respect it and stay calm.

When hunger is to come, do not manufacture it or display it; that would be a betrayal. It must come through grace. If it is meant to come, it will surely come; if it is not written, no amount of effort will bring it.

No one can do anything about it. This is the grace of that power, because this is the play of the Adi Shakti.

ಕ್ಷುಧಾ

ಈ ದೇವಿ ಶಕ್ತಿಯು ಸಂಸಾರದ ಎಲ್ಲಾ ಪ್ರಾಣಿ ವರ್ಗಗಳಲ್ಲಿ ಹಸಿವಿನ ರೂಪದಿಂದ
ವಿದ್ಯಾಮಾನಲಾಗಿರುವಳು, ಅಕಿಗೆ
ನಮಸ್ಕಾರಗಳು ನಮಸ್ಕಾರಗಳು ಪ್ರತಿ ಬಾರಿ ಬಾರಿಯೂ ನಮಸ್ಕಾರಗಳು.

ನಮ್ಮ ಜೀವನದಲ್ಲಿ ಹೇಗೆ ನಿದ್ರೆಯು ಬಹಳ ಅವಶ್ಯವಾಗಿದೆಯೋ, ಅದೇ ರೀತಿ ಹಸಿವು ಸಹ ನಮ್ಮೊಳಗೆ ಬಹಳ ಅವಶ್ಯಕವಾಗಿರುವುದು.
ಹಸಿವು ಎಂದರೆ ತನ್ನಷ್ಟಕ್ಕೆ ತಾನೇ ಹುಟ್ಟುವುದಲ್ಲ. ಹಸಿವು ಸ್ವಯಂಭು, ತನ್ನಷ್ಟಕ್ಕೆ ತಾನೇ ನಡೆಯುತ್ತದೆ / ಘಟಿಸುತ್ತದೆ.
ಹಸಿವಿಗೆ ಸಮಾಧಾನ ಹೇಳಬಹುದು, ಆದರೆ ಅದು ಆದಿಶಕ್ತಿಯ ರೂಪವಾಗಿ ಪ್ರಕಟವಾಗುವುದೇ ಈ ಹಸಿವು.
ಹೇಗೆ ನಿದ್ರೆಯು ಹಲವಾರು ರೀತಿಗಳಿವೆಯೋ, ಅದೇ ರೀತಿ ಹಸಿವು ಸಹ ಅನೇಕ ರೀತಿಯ ಆಕಾರದ ಹಸಿವುಗಳಿವೆ.
ಶಾರೀರಿಕವಾದ ಸ್ಥಿತಿಯಿಂದ ಹಸಿವು ಉತ್ಪತ್ತಿಯಾಗುವುದಿಲ್ಲ.

ಹೇಗೆಂದರೆ ಊಟ ನಮ್ಮ ಮುಂದೆ ಲಭ್ಯವಿದ್ದರೂ ನಮಗೆ ಹಸಿವು ಉಂಟಾಗದು / ಹಸಿವು ಬರುವುದಿಲ್ಲ. ಹಸಿವು ಸಹ ಆದಿಶಕ್ತಿಯ ಒಂದು ಲೀಲೆ.
ಇದನ್ನೇ ಮಾತೃಶಕ್ತಿ ಅಥವಾ ತಾಯಿ ಅನ್ನುತ್ತೇವೆ, ಅಂತಹ ಸ್ಥಿತಿಯಲ್ಲಿ ಹಸಿವಿನ ಶಕ್ತಿಯ ರೂಪವಾಗಿ ಪ್ರಕಟವಾಗುತ್ತದೆ.
ತನ್ನಷ್ಟಕ್ಕೆ ತಾನೇ ನಡೆಯುತ್ತಿರುತ್ತದೆ. (Its happening)

ಹಲವು ರೀತಿಯ ಹಸಿವು:
ಮಾನಸಿಕ ಹಸಿವು, ಭಾವಾತ್ಮಕ ಹಸಿವು,ಆಧ್ಯಾತ್ಮಿಕದ ಹಸಿವು - ಹೀಗೆ ಇನ್ನೂ ಹಲವಾರು ಹಸಿವುಗಳು.
ಆದರೆ ಜ್ಞಾನದ ಹಸಿವು ಎಲ್ಲರಿಗೂ, ಎಲ್ಲರಲ್ಲೂ, ಇರುವುದೋ ಅಥವಾ ಬರುವುದು ಗೊತ್ತಿಲ್ಲ?

ಆದರೆ ಜ್ಞಾನದ ಪ್ರವಾಹ ಹರಿಯುತ್ತಲೇ ಇರುತ್ತದೆ (supply)
ಜ್ಞಾನದ ಪ್ರವಾಹವನ್ನು ಹಲವಾರು ಜನ ಮಾಡುತ್ತಲೇ ಇದ್ದಾರೆ, ಆದರೆ ಜ್ಞಾನದ ಹಸಿವು ಯಾರಲ್ಲಿ

ಉತ್ಪತ್ತಿಯಾಗುವುದೋ / ಹಾಗೇನಾದರೂ ಅದರೆ ಅಂತಹವರು ಬೇರೆಯವರಿಗಿಂತ ಭಿನ್ನ ರೂಪವಾಗಿ ಇರುತ್ತಾರೆ. ಅಲ್ಲಿ ಆದಿಶಕ್ತಿಯ ಕೃಪೆ (grace) ಸಿಕ್ಕಿರುತ್ತದೆ, ಹಾಗೂ ಆಕೆಯ ಪ್ರಸಾರದ ಪ್ರವಾಹದಲ್ಲಿ ಪ್ರಸಾದವಾಗಿ ಸಿಕ್ಕಿರುತ್ತದೆ.

ಆಧ್ಯಾತ್ಮಿಕದ ಧ್ಯಾನದ ಹಸಿವು ಯಾರಲ್ಲಾದರೂ ಇದ್ದರೆ ಅದನ್ನು ಬೇರೆಯವರು ಉತ್ಪನ್ನ ಮಾಡುವುದಕ್ಕೆ ಆಗದು, ಅಥವಾ ಬಿತ್ತುವುದಕ್ಕೆ ಆಗದು
ಕೆಲವು ಧ್ಯಾನವು ಹಾಗೂ ಪದ್ಧತಿಗಳನ್ನು ತಿಳಿಸಿ ಕೊಡಬಹುದು
ಈ ಆಧ್ಯಾತ್ಮಿಕ ಜಗತ್ತಿನಲ್ಲಿ ಜ್ಞಾನವನ್ನು ಬಾಯಿಯ ಮೂಲಕ ಆಹಾರದ ರೀತಿ ತುರುಕಲು ಆಗುವುದಿಲ್ಲ, ತುಂಬಿ-ತುಂಬಿ ತುರುಕಿ - ತುರುಕಿ ಊಟದ ರೀತಿ ಬಡಿಸಿದರೆ, ಬಾಯಿ ತುಂಬಿದ ಮೇಲೆ ರೋದನೆಯಿಂದ ಪ್ರತಿರೋದದಿಂದ ಬಂಡಾರ ಆಗಿಬಿಡುತ್ತಾರೆ (rebel).
ನುಂಗುವುದಕ್ಕೆ ಆಗುವುದಿಲ್ಲ, ಅಲ್ಲಿ ಹಸಿವು ಇರುವುದಿಲ್ಲ, ಯಾಕೆಂದರೆ
ಅಲ್ಲಿ ಆದಿಶಕ್ತಿಯ ಲೀಲೆ ಕೃಪೆ ಇನ್ನೂ ಪ್ರಾರಂಭವಾಗಿಲ್ಲ.

ಆದರೆ ಸತ್ಸಂಗ ಮಾಡಿ, ಪ್ರಚಾರ ಮಾಡಿ, ಧ್ಯಾನ ಮಾಡಿ, ಸಾಧನೆ ಮಾಡಿ, ಇದನೆಲ್ಲ ಒಳಗಡೆ ತುಂಬಿಸಿಕೊಂಡ ಮೇಲೆ ಕೆಲವರಿಗೆ ಶರೀರ ಉಲ್ಟಾ - ಪಲ್ಟ ಮಾಡಿಸುತ್ತೆ, ಕೆಲವರು ಜ್ಞಾನ ಹಾಗೂ ಧ್ಯಾನವನ್ನು ಸಹ ಉಲ್ಟಾ ಪಲ್ಟಾ ಮಾಡಿರುತ್ತಾರೆ,
ಆದ್ದರಿಂದ ಇಡೀ ಆಧ್ಯಾತ್ಮಿಕ ಜಗತ್ತನ್ನು ಇಂತಹ ಉಲ್ಟಾ ಪಲ್ಟಾಗಳಲ್ಲಿ ತುಂಬಿಸಿದ್ದಾರೆ.
ಈ ಸೂತ್ರದ ಅನುಸಾರ ಇದು ಆದಿಶಕ್ತಿಯ ಕ್ಷೇತ್ರ, ಆ ಶಕ್ತಿಗೆ ಶರಣಾಗತ ನಾಗು.

ಈ ಆದಿಶಕ್ತಿಯ ಕ್ಷೇತ್ರವು ಎಲ್ಲಿದೆ?:- ಜಠರಾಗ್ನಿಯಲ್ಲಿದೆ
ನಾವು ಹಸಿವು ಅಂತ ನಮ್ಮ ಶರೀರದ ಒಳಗೆ ಜಠರಾಗ್ನಿ ಯನ್ನು ನೋಡುತ್ತೇವೆ,
ಜಠರ ಅಂದರೆ ಹೊಟ್ಟೆಯಲ್ಲಿ ಉತ್ಪತ್ತಿಯಾಗುವ ಒಂದು ಅಗ್ನಿ, ಬೆಂಕಿ, ಜ್ವಾಲೆ.
ಈ ಅಗ್ನಿ ಭೋಜನವನ್ನು, ಊಟವನ್ನು, ಕರಗಿಸುತ್ತದೆ. ಪಚನ ಮಾಡುತ್ತದೆ, ಪಚನ ಮಾಡಿ ರಸವನ್ನು ಉತ್ಪತ್ತಿ ಮಾಡಿ ಶರೀರದಲ್ಲಿ ಪ್ರವಹಿಸುತ್ತದೆ.
ಅದೇ ರೀತಿ ನಮ್ಮ ಜ್ಞಾನದ ಹಸಿವು ಆಗುತ್ತದೋ, ಅಲ್ಲಿ ಅಂತರ್ ಅಗ್ನಿ ಉಂಟಾಗಿ ಜ್ಞಾನ, ಧ್ಯಾನ, ಸಾಧನೆಗಳನ್ನು ಪಚನ ಮಾಡಿ ಜೀರ್ಣಿಸುತ್ತದೆ.

ಹಾಗೂ ನಮ್ಮ ಶರೀರದಲ್ಲಿ, ಜೀವನದಲ್ಲಿ, ರಸಸಿದ್ಧಿ ಉತ್ಪತ್ತಿ ಮಾಡಿ ಜ್ಞಾನದ ಸಿದ್ದತ್ವವನ್ನು ಹಿಡಿದಿಟ್ಟುರುತ್ತದೆ. (Purity & purification)

ಆಗ ಧ್ಯಾನದಲ್ಲಿ ಉಲ್ಟಾ ಪಲ್ಟಾ ಮಾಡಲ್ಲ / ಪ್ರವಚನ ಮಾಡಲ್ಲ,
ನಾವು ಧ್ಯಾನ ಮತ್ತು ಜ್ಞಾನ ಮಾರ್ಗದಲ್ಲಿ ಜೀವಿಸುತ್ತೇವೆ.

ಹೇಗೆ ಜಠರದಲ್ಲಿ ಊಟ ತುಂಬಿಸಿದ ಮೇಲೆ ಅದು ಹಾಗೆ ಇರುವುದಿಲ್ಲ, ಅದು ಜೀರ್ಣವಾಗಿ ಮಾಯವಾಗುತ್ತದೆ. ಸಕ್ರಿಯ ವಾಗುತ್ತದೆ, ಕ್ರಿಯೆ ಅನ್ನುವುದು ಅರ್ಥವಾಗುತ್ತೆ. ಜೀರ್ಣ ವಾಗುವುದನ್ನು ಗಮನಿಸುತ್ತೇವೆ, ಶರೀರದಲ್ಲಿ ಶಕ್ತಿಯನ್ನು ತುಂಬಿ ಚೈತನ್ಯ ವಾಗುವುದನ್ನು ಗಮನಿಸುತ್ತೇವೆ, ಅದೇ ರೀತಿ ಆ ದೇವಿಯ ಚೈತನ್ಯ ಶಕ್ತಿಯನ್ನು ಪ್ರಕಟ ವಾಗುವುದನ್ನು ಗಮನಿಸುತ್ತೇವೆ.

ಅದೇ ರೀತಿ ಜ್ಞಾನ ಮತ್ತು ಧ್ಯಾನ ಹಸಿವು ಬರುವುದೋ ಅದು ಸಹ ಪಚನವಾಗಿ /ಜೀರ್ಣವಾಗುತ್ತದೆ, ರಸಸಿದ್ಧಿ ಆಗುತ್ತದೆ.
ಹೀಗೆ ರಸಸಿದ್ಧಿ ಆದ ಮೇಲೆ ಏನು ಅರ್ಥವಾಗುವುದೆಂದರೆ, ಶಾಂತಿ, ಪ್ರಸನ್ನತೆ, ಪ್ರೇಮ, ಸಮಾಧಾನ, ಸಮಾನತೆ, ಸ್ವಯಂ ಸ್ಥಿತಿಯು ಪ್ರಾಪ್ತಿಯಾಗುತ್ತದೆ.

ಆದರೆ ಇದನ್ನೆಲ್ಲಾ ಪ್ರಾಪ್ತಿ ಆದ ಮೇಲೆ, ಜ್ಞಾನ ಬಂದಿದೆ ಎಂದು ಪ್ರವಚನ ಹೇಳಲ್ಲ, ಬೌದ್ಧಿಕ ವಿಶ್ಲೇಷಣೆ ಮಾಡಲ್ಲ.
ಅಲ್ಲಿ ಸಿಗುವುದೇ ಪ್ರೇಮ, ಶಾಂತಿ, ಅಂತರ್ಮುಖವಾದ ಪ್ರಸನ್ನತೆ, ಲಯಬದ್ಧವಾದ ಜೀವನ, ಒಂದು ಜಲಕ್, ಸ್ವಯಂ ಸ್ಥಿರತೆ

ಇದರಿಂದ ಅರ್ಥವಾಗುತ್ತೆ ಹಸಿವು ಇತ್ತು ಈಗ ಶಾಂತವಾಗಿದೆ, ಆದ್ದರಿಂದ ಜ್ಞಾನದ ಹಸಿವನ್ನು ಪ್ರತೀಕ್ಷೆ ಮಾಡುತ್ತಾ ಇರಿ, ಅದಕ್ಕೆ respect ಮಾಡಿ ಶಾಂತವಾಗಿರಿ,

ಯಾವಾಗ ಹಸಿವು ಆಗುವುದೋ ಅದನ್ನು ಉತ್ಪತ್ತಿ ಮಾಡಬೇಡಿ, ಪ್ರಕಟಿಸಬೇಡಿ, ಅದು ದ್ರೋಹವಾಗುತ್ತದೆ.
ಅದು ಕೃಪೆಯಿಂದ ಸಿಗಬೇಕು (grace), ಬರಬೇಕೆಂದರೆ ಬಂದೇ ಬರುತ್ತದೆ, ಸಿಕ್ಕೇ ಸಿಗುತ್ತದೆ, ಬರೆದಿದ್ದರೆ ಎಷ್ಟೇ ಪ್ರಯತ್ನ ಮಾಡಿದರೂ ಬರುವುದಿಲ್ಲ.
ಯಾರು ಏನು ಮಾಡಲಾಗದು, ಇದು ಆಶಕ್ತಿಯ ಕೃಪೆ, ಏಕೆಂದರೆ ಅದೇ ಆದಿಶಕ್ತಿಯ ಲೀಲೆ.

ಓಂ ನಮಃ ಚಂಡಿಕಾಯೈ · ಓಂ ದುರ್ಗಾರ್ಪಣಮಸ್ತು

DEVI STUTI · SUTRA 6 OF 23

Meeting the Shadow

ಛಾಯಾ · Chhaya

ಯಾ ದೇವೀ ಸರ್ವಭೂತೇಷು ಛಾಯಾರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ

Yā devī sarvabhūteṣu chāyārūpeṇa saṃsthitā
Namastasyai namastasyai namastasyai namo namaḥ

> Guruji's Devi Stuti talks, in Kannada: the YouTube playlist

That Devi who abides in all beings in the form of shadow (of the

higher self): salutations to Her, again and again.

This Devi Shakti is present in every class of creature in the world in the form of shadow. To Her, salutations, salutations, salutations, every time salutations.

What is chhaya? The sutra says chhaya means shadow.

Shadow is a significant state. It can be seen in many conditions (appearance, shadow). It is not illusion.

Illusion (bhrame), hallucination (bhranti) and shadow (chhaya) each mean something different. A hallucination is what the eye does not actually see, while a shadow is something we do see. That is the difference between chhaya and bhranti.

A shadow appears in bright light. When bright light falls on the body, the body's shadow appears and is seen.

But a shadow has no power of its own at its root. That such a state appears at all is a play of the Adi Shakti, a vast great power that is an extension of the Devi's power.

It is said that this sutra's beautiful word chhaya shows how receptive the Indian mind and its power of knowledge have been.

